ಅಧ್ಯಕ್ಷರು:- ಮಾನ್ಯ ಮುಖ್ಯಮಂತ್ರಿಯವರು ಏನು ವಿವರಣೆಯನ್ನು ನೀಡಿದ್ದಾರೆ, ಅದರ ಆಶ್ರಯದಲ್ಲಿ ಸಾಕಷ್ಟು, ಬೆಳಗಾವಿ ಮತ್ತು ಗಡಿಪ್ರದೇಶಗಳ ಬಗ್ಗೆ ಅವರು ಏನು ಸರಕಾರದ ಕಳಕಳಿಯನ್ನು ಮತ್ತು ಸರಕಾರದ ಧೃಡ ನಿರ್ಧಾರವನ್ನು ವ್ಯಕ್ತಪಡಿಸಿದ್ದಾರೆ; ಅದರ ಆಧಾರದ ಮೇಲೆ ಮಾನ್ಯ ಸದಸ್ಯರು ತಮ್ಮ ಸ್ಥಾನಕ್ಕೆ ಹಿಂದಿರುಗಿ ಈ ಸಭೆಯ ಕಾರ್ಯಕಲಾಪಗಳಲ್ಲಿ ಭಾಗವಹಿಸ ಬೇಕೆಂದೂ ನಾನು ಅವರನ್ನು ಕೇಳಿಕೊಳ್ಳುತ್ತೇನೆ.

ಈಗ ವಿಧೇಯಕವನ್ನು ಪರ್ಯಾಲೋಚಿಸುವುದು ಮತ್ತು ಅಂಗೀಕರಿಸುವುದು.

ಶ್ರೀ ಸಿ. ಭೈರೇಗೌಡ:- ಮಾನ್ಯ ಅಧ್ಯಕ್ಷರೇ, ನಾನು ಒಂದು ಗಮನ ಸೆಳೆಯುವ ಸೂಚನೆಯನ್ನು ಕಳುಹಿಸಿದ್ದೆ. ಅದಕ್ಕೆ ಉತ್ತರ ಬರಲಿಲ್ಲ. ನಾನು ಅದಕ್ಕೆ ಉತ್ತರ ಬೇಕೆಂದು ಅಪೇಕ್ಷೆ ಮಾಡುತ್ತಾ ಇಲ್ಲ ಆದರೂ ವಿಷಯ ಏನೆಂದು ಇಲ್ಲಿ ಪ್ರಸ್ತಾಪ ಮಾಡುತ್ತೇನೆ. ಸಚಿವರು ಹೇಗೂ ಇಲ್ಲಿ ಇದ್ದಾರೆ ಅವರು ಉತ್ತರ ಕೊಡುವಾಗ ಅವರ ಗಮನಕ್ಕೂ ಇದನ್ನು ನಾನು ತಂದಿದ್ದೆ ಮತ್ತು ಮುಖ್ಯ ಮಂತ್ರಿಗಳ ಗಮನಕ್ಕೂ ತಂದಿದ್ದೆ. ವಿಷಯವೇನೆಂದರೆ, ಎಕ್ಸೈಜ್ ಕಂಟ್ರಾಕ್ಟರ್ಸ್ ಮೂರು ತಿಂಗಳ ಬ್ಯಾಂಕ್ ಗ್ಯಾರಂಟಿ ಕೊಡಬೇಕೆಂದು ಕಾನೂನು ಇದೆ. ಈ ಗ್ಯಾರಂಟಿ ಕೊಡಲು 15 ದಿವಸಗಳ ಅವಕಾಶ ಕೊಟ್ಟಿದ್ದಾರೆ. ಅದಕ್ಕೆ ನನ್ನ ಆಕ್ಷೇಪಣೆ ಇಲ್ಲ. ಇದರಿಂದ ಸರ್ಕಾರದ ಖಜಾನೆಗೆ ಹೆಚ್ಚಿನ ಹಣ ಬರುತ್ತದೆಂದರೆ ಸಂತೋಷ. ಆದರೆ ಅವರು 15 ದಿವಸವಾದರೂ ಕೊಟ್ಟಿಲ್ಲ. ಮೊನ್ನೆವರೆಗೆ 104 ಇಲ್ಲವೇ 105 ಜನರು ಕೊಟ್ಟಿರಬಹುದು. ಇನ್ನುಳಿದವರು ಕೊಟ್ಟಿಲ್ಲ.

ಅಧ್ಯಕ್ಷರು:- ಇಲ್ಲಿ ಚರ್ಚೆಗೆ ಬೇಕಾದಷ್ಟು ವಿಚಾರಗಳಿವೆ ಆದರಿಂದ ಇದು ಸಾಕು.

ಶ್ರೀ ಸಿ. ಭೈರೇಗೌಡ:- ಅವರು ಇದನ್ನು ಕೊಡಲು ಯಾವರೀತಿ ತಪ್ಪಿಸಿಕೊಳ್ಳಲು ಪ್ರಯತ್ನ ಮಾಡುತ್ತಿದ್ದಾರೆ ಎಂದರೆ, ಕೊರಟಗೆರೆ ತಾಲೂಕಿನಲ್ಲಿ ಒಬ್ಬ ಕಂಟ್ರಾಕ್ಟರ್ ಅನ್ನು ಮೊಂಟಲಿ ಸರಿ ಇಲ್ಲ ಎಂದು ಮೆಂಟಲ್ ಆಸ್ಪತ್ರೆಲಿ ಅಡ್ಮಿಟ್ ಮಾಡಿದ್ದಾರೆ.

ಅಧ್ಯಕ್ಷರು:- ಅವರ ತಲೆ ಕೆಟ್ಟರೆ ಇನ್ನೆಲ್ಲಿಗೆ ಸೇರಿಸಬೇಕೆಂದು ಹೇಳುತ್ತೀರಿ?

ಶ್ರೀ ಸಿ. ಭೈರೇಗೌಡ:- ನಿಜವಾಗಿಯೂ ತಲೆಕೆಟ್ಟಿದ್ದರೆ ನನ್ನ ಆಕ್ಷೇಪಣೆ ಇರುತ್ತಿರಲಿಲ್ಲ. ಆದರೆ ತಲೆ ಸರಿಯಾಗಿದ್ದರೂ ಕೂಡ ಸರ್ಕಾರಕ್ಕೆ ಕೊಡುವ ಆದಾಯ ತಪ್ಪಿಸಬೇಕೆಂಬ ದೃಷ್ಟಿಯಿಂದ ಈ ರೀತಿ ಸೇರಿಸಿದ್ದಾರೆ. ಅವರಿಗೆ ಕೊಡಲಾಗಿದ್ದ 15 ದಿವಸ ಅವಧಿ ಮುಗಿದಿದೆ. ಆದ್ದರಿಂದ ಇನ್ನು ಮುಂದಕ್ಕೆ ಆ ಕಂಟ್ರಾಕ್ಟರ್ ಲೈಸೆನ್ಸ್ ಕ್ಯಾನ್ಸಲ್ ಮಾಡಿ ಸರ್ಕಾರಕ್ಕೆ ಬರುವ ಆದಾಯವನ್ನು ಯಾವರೀತಿ ರಕ್ಷಣೆ ಮಾಡುತ್ತಾರೆಂಬುದನ್ನು ತಿಳಿಸಬೇಕು.

ಅಧ್ಯಕ್ಷರು:- ಈಗ ಆಬ್ಕಾರಿ ಸಚಿವರು ಉತ್ತರಿಸುವರು, ಹಾಗೆಯೇ ಆರೋಗ್ಯ ಸಚಿವರನ್ನೂ ಸಹ ಸಭೆಗೆ ಕರೆಸುತ್ತೇನೆ. ಏಕೆಂದರೆ ತಾವು ಹೇಳಿದ ತಲೆ ಕೆಟ್ಟ ರೋಗಿಯ ಬಗ್ಗೆ ವಿಚಾರಿಸಲಿಕ್ಕೆ.

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ:- ಭೈರೇಗೌಡರು ಸಾಕಷ್ಟು ತಿಳಿದುಕೊಂಡಿದ್ದಾರೆ. ಆದ್ದರಿಂದ ಅವರಿಗೆ ಆಬಕಾರಿ ಖಾತೆ ಕೊಡಬಹುದು ಅಥವಾ ಅವರಿಗೆ ಏನಾದರೊಂದು ಕೊಡುವ ಬಗ್ಗೆ ಆಲೋಚನೆ ಮಾಡಿ.

ಅಧ್ಯಕ್ಷರು:- ನಿಮ್ಮ ಮಾತು ನಡೆಯುತ್ತಿದ್ದಾಗ ಅವರಿಗೆ ನೀವು ಏನೂ ಮಾಡಲಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ:- ಅವರು ಮಾಡಿದ ಕೆಲಸಕ್ಕೆ ಪ್ರತಿಫಲ ಕೂಡ ಕೊಡಲಿಲ್ಲ

ಅಧ್ಯಕ್ಷರು:- ಹೌದು.

ಶ್ರೀ ಎಂ. ರಾಜಶೇಖರಮೂರ್ತಿ:- ಮಾನ್ಯ ಅಧ್ಯಕ್ಷರೇ, ನಿನ್ನೆ ಮಧ್ಯಾಹ್ನದವರೆಗೆ 125 ಬಂದಿದೆ. ಈಗ ಬ್ಯಾಂಕ್ ಗ್ಯಾರಂಟಿಗಳು ಬರುತ್ತಿವೆ. ಅಮೌಂಟ್ ಜಾಸ್ತಿ ಇರುವುದರಿಂದ ಕೆಲವು ಬ್ಯಾಂಕ್‌ಗಳವರು ಕನ್‌ಸಾರ್ಟಿಯಮ್ ಮಾಡಿಕೊಂಡು ಒಬ್ಬರಿಗೊಬ್ಬರು ಮಾತನಾಡಿಕೊಂಡು

ಕೊಡಬೇಕಾಗಿದೆ. ಇದರಿಂದ ಸ್ವಲ್ಪ ವಿಳಂಬವಾಗಿದೆ. ಇಲ್ಲಿ ಸದನಕ್ಕೆ ನೇರವಾಗಿ ಹೇಳದಿರತಕ್ಕ ಕೆಲವು ವಿಚಾರಗಳಿವೆ. ಅದನ್ನು ನಾನು ಹೇಳುವುದಕ್ಕೆ ಹೋಗಬಾರದು. ಇನ್ನೂ ಕೆಲವು ನಾನು ಹೇಳದೆ ಇರುವ ವಿಚಾರಗಳಿವೆ. ನಮಗೆ ಹಣ ಬರಲಿಲ್ಲ ಎಂದು ಯಾರು ಆತಂಕಪಡಬೇಕಾಗಿಲ್ಲ ಏಕೆಂದರೆ ತಿಂಗಳ ಹಣ ನಮ್ಮ ಹತ್ತಿರ ಇದೆ. ಆ ಅಮೌಂಟ್‌ನಿಂದ ಆಜೆಸ್ಟ್ ಮಾಡಿಕೊಳ್ಳಬಹುದು. ಒಂದು ವೇಳೆ ಒಂದೋ ಎರಡೋ ಬರದಿದ್ದರೆ ಮತ್ತೆ ಹರಾಜು ಮಾಡಬಹುದು.

MR. SPEAKER:- You have taken enough action - very good.

ಶ್ರೀ ಎಂ. ರಾಜಶೇಖರಮೂರ್ತಿ:- ಒಂದು ತಿಂಗಳದ್ದು ನಮ್ಮ ಹತ್ತಿರ ಇದ್ದೇ ಇದೆ.

ಶ್ರೀ ಕೆ. ಲಕ್ಕಪ್ಪ:- ಮಾನ್ಯ ಅಧ್ಯಕ್ಷರೇ ಕ್ಷಾಮದ ಬಗ್ಗೆ ನಾವು ಚರ್ಚೆ ಮಾಡಲಿಲ್ಲ; ಸರ್ಕಾರ ಕೂಡ ಇದರ ಬಗ್ಗೆ ಉತ್ತರಿಸಲಿಲ್ಲ. ತಾವು ಸರ್ಕಾರಕ್ಕೆ ಹೇಳಬೇಕು. ಅಭಾವ ಪರಿಸ್ಥಿತಿ ಇರುವಕಡೆ ಕೆಲಸಗಳನ್ನು ತೆಗೆದುಕೊಳ್ಳಲು ಜಿಲ್ಲಾ ಪರಿಷತ್‌ಗಳಲ್ಲಿ ಹಣ ಇಲ್ಲ.....

(ಗೊಂದಲ)

ಶ್ರೀ ಎ. ರುಕ್ಮಯ್ಯಪ್ಪೂಜಾರಿ:- ಕಾಸರಗೋಡಿನ ಕನ್ನಡ ವಿದ್ಯಾರ್ಥಿಗಳ ಬಗ್ಗೆ ಸರ್ಕಾರ ಏನನ್ನೂ ಹೇಳಲಿಲ್ಲ.

ಶ್ರೀ ಎಲ್.ಆರ್. ಶಿವರಾಮೇಗೌಡ:- ನೀವು ಒಬ್ಬೊಬ್ಬರನ್ನೇ ಕರೆದರೆ ನಾವು ಸಂಕ್ಷಿಪ್ತವಾಗಿ ಹೇಳುತ್ತೇವೆ.

ಶ್ರೀ ಕೆ. ಲಕ್ಕಪ್ಪ:- ಮಳೆ ಇಲ್ಲದ ಕಾರಣ ಜನಕ್ಕೆ ಕೆಲಸ ಇಲ್ಲದೆ, ಹೊರಗಡೆ ಹೋಗುತ್ತಿದ್ದಾರೆ.

ಅಧ್ಯಕ್ಷರು:- ಈ ಅಭಾವದ ಬಗ್ಗೆ ಸರ್ಕಾರ ಏನಾದರೂ ಹೇಳುವುದು ಇದೆಯೇ? ಈಗ ಮಳೆ ಬಂದರೂ ಸಹ ಏನೂ ಆಗುವುದಿಲ್ಲ.

ಶ್ರೀ ಎಲ್.ಆರ್. ಶಿವರಾಮೇಗೌಡ:- ನಮ್ಮ ಭಾಗಗಳನ್ನು ಬರಗಾಲಪೀಡಿತ ಪ್ರದೇಶ ಎಂದು ಘೋಷಿಸಬೇಕು. ಏಕೆಂದರೆ ವ್ಯವಸಾಯಕ್ಕೆ ಬಹಳ ತೊಂದರೆ ಆಗಿದೆ.

ಶ್ರೀ ಎಂ. ವೀರಪ್ಪಮೊಯಿಲಿ:- ಮಾನ್ಯ ಅಧ್ಯಕ್ಷರೇ, ಈ ಬಗ್ಗೆ ಬರಗಾಲದ ವಿಚಾರದ ಬಗ್ಗೆ ಸನ್ಮಾನ್ಯ ಹಿರಿಯ ಶಾಸಕರಾದಂಥ ಲಕ್ಕಪ್ಪನವರು ಮತ್ತು ಅನೇಕ ಸದಸ್ಯರು ಕೂಡ ಕೆಲವು ಕಡೆ ಇರುವ ಬರಗಾಲದ ಪರಿಸ್ಥಿತಿಯ ಬಗ್ಗೆ ಹೇಳಿದ್ದಾರೆ. ಆ ಬಗ್ಗೆ ನಾವು ವರದಿ ತರಿಸಿ ಏನು ಅದಕ್ಕೆ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳಲು ನಾನು ಸನ್ಮಾನ್ಯ ಕಂದಾಯ ಸಚಿವರ ಗಮನಕ್ಕೂ ಕೂಡ ತರುತ್ತೇನೆ. ನಾವು ಸೂಕ್ತವಾದಂಥ ಕಾರ್ಯಕ್ರಮವನ್ನು ಬರಗಾಲದ ಬಗ್ಗೆ ಎಲ್ಲೆಲ್ಲಿ ಈ ರೀತಿ ಪರಿಸ್ಥಿತಿ ಇದೆ, ಎಲ್ಲೆಲ್ಲಿ ಆ ರೀತಿ ಸಮಸ್ಯೆ ಇದೆ, ಎಲ್ಲಿ ಕೆಲಸ ಕೊಡಬೇಕು ಎಲ್ಲೆಲ್ಲಿ ಬರಗಾಲದ ಪರಿಸ್ಥಿತಿ ಇದೆ, ಎಲ್ಲಿ ಕೆಲಸವನ್ನು ಒದಗಿಸಬೇಕು? ಅಲ್ಲಿ ಕೆಲಸವನ್ನು ಒದಗಿಸಲಿಕ್ಕೆ ಸರ್ಕಾರದವರು ಬದ್ಧರಿದ್ದೇವೆ. ಅದನ್ನು ಮಾಡುತ್ತೇವೆ.

ಶ್ರೀ ಕೆ.ಹೆಚ್. ಹನುಮೇಗೌಡ:- ರಿಪೋರ್ಟ್ ಬಂದಿದೆ. ಮಳೇನೆ ಇಲ್ಲ.

ಶ್ರೀ ಗೋಪಿನಾಥ್ ಆರ್ ಸಾಂಡ್ರಾ:- ಮಾನ್ಯ ಅಧ್ಯಕ್ಷರೇ, ಆಫೀಸರ್ಸ್ ರಿಪೋರ್ಟ್ ಸರಿ ಇದೆ, ಮಳೆ ಬಂದಿದೆ, ಬೆಳೆ ಇದೆ, ಎಲ್ಲಾ ಚೆನ್ನಾಗಿದೆ, ಎಲ್ಲಾ ಇದೆ ಎಂದು ಹೇಳುತ್ತಾರೆ. ಈ ಆಫೀಸರ್ ರಿಪೋರ್ಟ್‌ನ್ನು ನೋಡುತ್ತೀರೋ ಅಥವಾ ಆಕ್ಚುಯಲ್ ಆಗಿ ಏನಿದೆ ಎಂಬುದನ್ನು ನೋಡುತ್ತೀರೋ ದಯಮಾಡಿ ನೋಡಿ.

ಶ್ರೀ ಎ. ರುಕ್ಮಯ್ಯಪ್ಪೂಜಾರಿ:- ಮಾನ್ಯ ಅಧ್ಯಕ್ಷರೇ, ಈ ಕಾಸರಗೋಡಿನ ಕನ್ನಡ ವಿದ್ಯಾರ್ಥಿಗಳಿಗೆ ನಮ್ಮ ರಾಜ್ಯದಲ್ಲಿ ಪ್ರವೇಶಕೊಡುವ ಬಗ್ಗೆ ನಾವು ಪ್ರಸ್ತಾಪ ಮಾಡಿದ್ದೆವು. ಅದರ ಬಗ್ಗೆ ಉತ್ತರ ಬೇಕು.

ಶ್ರೀ ಎಲ್.ಆರ್. ಶಿವರಾಮೇಗೌಡ:- ನಾನು ಕೇಳಿದ್ದಕ್ಕೆ ಉತ್ತರ ಬರಲಿಲ್ಲ?

ಅಧ್ಯಕ್ಷರು:- ಈಗ ಹೇಳಿ ಆಯಿತಲ್ಲಾ ಇನ್ನು ಏನು ಹೇಳಬೇಕು ಎಂದು ಹೇಳುತ್ತೀರಿ? ಅವರು ಹೇಳಿದ್ದನ್ನು ನೀವು ಕೇಳಲಿಲ್ಲವೇ?

(ಗೊಂದಲ)

ಶ್ರೀ ಎಲ್.ಆರ್. ಶಿವರಾಮೇಗೌಡ:- ದಯಮಾಡಿ ನನಗೆ ಅವಕಾಶ ಕೊಡಿ. ನಮ್ಮ ಭಾಗದಲ್ಲಿ ನಾಗಮಂಗಲ ತುಮಕೂರಿನ ಕೆಲವು ಭಾಗಗಳಲ್ಲಿ ಮಳೆ ಬಾರದೆ ಬಹಳ ಭೂಮಿಯೆಲ್ಲಾ ಒಣಗಿ ಇವತ್ತು ರೈತರು ಕಂಗಾಲಾಗಿದ್ದಾರೆ. ಮುಂಗಾರು ಬೆಳೆ ಆಗುತ್ತಿಲ್ಲ. ಆದ್ದರಿಂದ ಅದನ್ನು ಬರಗಾಲದ ಪೀಡಿತ ಪ್ರದೇಶ ಎಂದು ಘೋಷಣೆ ಮಾಡಬೇಕು. ಇದರ ವರದಿಯನ್ನು ತರಿಸಿ ಮೂಡಲು ಎಷ್ಟು ದಿವಸ ಬೇಕಾಗುತ್ತದೆ ಎಂಬುದನ್ನು ಅವರು ತಿಳಿಸಬೇಕಾಗುತ್ತದೆ.

ಡಾ॥ ಎನ್.ಬಿ. ನಂಜಪ್ಪ:- ಇದು ಒಂದು ತಾಲ್ಲೂಕಿನಲ್ಲಿಲ್ಲ. ನಮಗೆ ಬಂದಿರುವ ಮಾಹಿತಿ ಪ್ರಕಾರ ಈಗಾಗಲೇ...

ಅಧ್ಯಕ್ಷರು:- ಚೆನ್ನರಾಯಪಟ್ಟಣ ತಾಲ್ಲೂಕಿನಲ್ಲಿಯೂ ಇದೆ ಪರಿಸ್ಥಿತಿ ಇದೆಯೆ?

ಶ್ರೀ ಎಂ. ವೀರಪ್ಪಮೊಯಿಲಿ:- ಎಲ್ಲವನ್ನೂ ಕೂಡಾ ಗಮನಕ್ಕೆ ತೆಗೆದು ಕೊಂಡಿದ್ದೇನೆ.

(ಗೊಂದಲ)

ಅಧ್ಯಕ್ಷರು:- ಮಾಗಡಿ ತಾಲ್ಲೂಕಿನಲ್ಲಿ ಮತ್ತು ಪಿರಿಯಾಪಟ್ಟಣದಲ್ಲಿಯೂ ಇದೇ ಪರಿಸ್ಥಿತಿ ಇದೆಯಾ?

ಒಬ್ಬ ಮಾನ್ಯ ಸದಸ್ಯರು:- ಕರ್ನಾಟಕ ರಾಜ್ಯದ ತುಂಬಾ ಇದೆ ಪರಿಸ್ಥಿತಿ ಇದೆ ಸ್ವಾಮಿ.

ಶ್ರೀ ಎಂ. ವೀರಪ್ಪಮೊಯಿಲಿ:- ಮಾನ್ಯ ಅಧ್ಯಕ್ಷರೇ, ಈಗ ತಮಗೆ ಗೊತ್ತಿರುವ ಪ್ರಕಾರ 1978-79ನೇ ಇಸವಿಯಿಂದ ಯಾವುದೇ ಪ್ರದೇಶವನ್ನು ಬರಗಾಲದ ಪ್ರದೇಶ ಎಂದು ಹೇಳಿ ಘೋಷಣೆ ಮಾಡತಕ್ಕಂಥ ಕ್ರಮವನ್ನು ಕೇಂದ್ರ ಸರ್ಕಾರದಲ್ಲಿ ಬಿಟ್ಟುಬಿಟ್ಟಿದ್ದಾರೆ. ಈಗೆ ಎಲ್ಲೆಲ್ಲಿ ಕೆಲಸ ಇಲ್ಲದೇ ಆಥವಾ ಬರಗಾಲ ಇದೆ, ಬರಗಾಲದ ಪ್ರದೇಶ ಎಲ್ಲೆಲ್ಲಿ ಎಂದು ಹೇಳಿದರೂ ಅದನ್ನು ಘೋಷಣೆ ಮಾಡದೇ ಕೂಡಾ ಕಾರ್ಯಕ್ರಮವನ್ನು ತೆಗೆದುಕೊಳ್ಳತಕ್ಕಂಥದ್ದು 1978-79ನೇ ಇಸವಿಯಿಂದ ನಡೆದುಕೊಂಡು ಬಂದಿದೆ. ಆದ್ದರಿಂದ ಇದರ ಬಗ್ಗೆ ಈ ವಿಚಾರದ ಬಗ್ಗೆ ತಕ್ಷಣ ಸೂಚನೆ ಇಲ್ಲದೇ ಇರುವುದರಿಂದ ತಕ್ಷಣ ವರದಿಯನ್ನು ಕೊಡಲಿಕ್ಕೆ ಆಗಲಿಲ್ಲ. ಬಹುಶಃ ಈ ವಿಚಾರದ ಬಗ್ಗೆ ಹಿಂದೆ ಸೂಚನೆಯನ್ನು ಕೊಟ್ಟಿದ್ದಾರೆ ನಾವು ಕೊಡಬಹುದಾಗಿತ್ತು. ಆದರೆ ನಾವು ಇದನ್ನು ಕಂದಾಯ ಸಚಿವರ ಗಮನಕ್ಕೆ ತರುತ್ತೇವೆ. ನಾವು ಮತ್ತೊಂದು ವಿಚಾರವನ್ನು ಸರ್ಕಾರದ ಪರವಾಗಿ ಹೇಳುವುದಕ್ಕೆ ಇಚ್ಛೆಪಡುತ್ತಿದ್ದೇನೆ. ಎಲ್ಲೆಲ್ಲಿ ಈ ರೀತಿಯ ಪರಿಸ್ಥಿತಿ ಇದೆ, ಎಲ್ಲಿ ಕೆಲಸಗಳನ್ನು ಒದಗಿಸುವುದಕ್ಕೆ, ಕಾಮಗಾರಿಯನ್ನು ತೆಗೆದುಕೊಳ್ಳುವುದಕ್ಕೆ ನಾವು ಎಲ್ಲಾ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುತ್ತೇವೆ.

ಅಧ್ಯಕ್ಷರು:- ಈಗ ವಿಧೇಯಕವನ್ನು ಪರ್ಯಾಲೋಚಿಸುವುದು; 1990ನೇ ಇಸವಿಯ ಕರ್ನಾಟಕ ರಾಜ್ಯದ ನಾಗರೀಕ ಸೇವೆಗಳ (ನಿರಸನ) ವಿಧೇಯಕ. ಇದರ ಬಗ್ಗೆ ಚರ್ಚೆ ಮಾಡತಕ್ಕಂಥವರು ಇದ್ದೀರಾ?

ಶ್ರೀ ರಾಜಾಮದನಗೋಪಾಲ ನಾಯಕ್:- ಮಾನ್ಯ ಅಧ್ಯಕ್ಷರೇ ವಾಟಾಳ್ ನಾಗರಾಜ್‌ರವರು ಬಾವಿಯಲ್ಲಿ ಬಿದ್ದು ಬಹಳ ಹೊತ್ತಾಯಿತು. ಅವರ ಪರಿಸ್ಥಿತಿ ಏನಾಯಿತು ನೋಡಿ.

ಶ್ರೀ ಕೆ.ಎಸ್. ಈಶ್ವರಪ್ಪ:- ಇಷ್ಟು ಹಗುರವಾಗಿ ಮಾತನಾಡುವುದು ಒಳ್ಳೆಯದಲ್ಲ. ಯಾರ ಬಗ್ಗೆಯೂ ಇಷ್ಟು ಹಗುರವಾಗಿ ದಯವಿಟ್ಟು ಮಾತನಾಡಬೇಡಿ.

(ಗೊಂದಲ)

ಅಧ್ಯಕ್ಷರು:- ಇಲ್ಲಿ ಹಗುರನೂ ಇಲ್ಲ, ಬಾರನೂ ಇಲ್ಲ, ಕುಳಿತುಕೊಳ್ಳಿ. ನಾನು ಕಳೆದ ನಾಲ್ಕಾರು ದಿನಗಳಿಂದ ಬಾರವಾದುದನ್ನು, ಹಗುರವಾದುದನ್ನು ನೋಡಿದ್ದೇನೆ, ಕುಳಿತುಕೊಳ್ಳಿ.

(ಗೊಂದಲ)

MR. SPEAKER:- I have called upon Sri Koujalgi to speak ನಾನು ಕೌಜಲಗಿಯವರನ್ನು ಕರೆದಿದ್ದೇನೆ. ನಿಮ್ಮನ್ನೂಕರೆದಿಲ್ಲ, ಅವರನ್ನೂ ಕರೆದಿಲ್ಲ. ನೀವುಗಳು ಹೇಳುವುದು

ಯಾವುದೂ ಕಡತಕ್ಕೆ ಹೋಗುವುದಿಲ್ಲ. ನಾನು ಕರೆದಿರತಕ್ಕಂಥದ್ದು ಕೌಜಲಗಿಯವರನ್ನು. ಈಗ ಕೌಜಲಗಿಯವರು ಏನು ಹೇಳುತ್ತಾರೆ, ಅದು ಕಡತಕ್ಕೆ ಹೋಗುತ್ತದೆ.

ಶ್ರೀ ಡಿ. ಬಿ. ಚಂದ್ರೇಗೌಡ:- ಈಗ ತಾವೂ ಆಪೀಲು ಮಾಡಿದ್ದೀರಿ, ಮುಖ್ಯಮಂತ್ರಿಗಳು ಮಾಡಿದ್ದಾರೆ, ನಾನು ಹೇಳಿದ್ದೇನೆ. ಅವರದ್ದು ಕನಿಷ್ಠ ಈ ಧ್ವಜದ ಬಗ್ಗೆ ಮುಂದಿನ ಶಾಸನಸಭೆಯಲ್ಲಾದರೂ ಆಕ್ಟ್ ಏನು ಇದೆ, ಅದನ್ನು ತರಿಸಿ ಇದಕ್ಕೆ ಒಂದು ಅಮೆಂಡ್‌ಮೆಂಟ್ ಇಲ್ಲವೇ ಅದಕ್ಕೆ ಬೇಕಾದಂಥ ಒಂದು ವ್ಯವಸ್ಥೆಯನ್ನು ಮಾಡುವುದಕ್ಕೆ ಪ್ರಯತ್ನ ಮಾಡಬೇಕು.

ಶ್ರೀ ಎಸ್.ಹೆಚ್. ಕೌಜಲಗಿ:- ಮಾನ್ಯ ಅಧ್ಯಕ್ಷರೇ, ಇವೊತ್ತಿನ ದಿವಸ....

ಶ್ರೀ ಡಿ.ಬಿ. ಚಂದ್ರೇಗೌಡ:- ಮುಂದಿನ ಅಧಿವೇಶನದಲ್ಲಿಯಾದರೂ ಇದನ್ನು ತೆಗೆದುಕೊಳ್ಳೋಣ. ಇವೊತ್ತು ಕೊನೆಯ ದಿವಸ. ಇವೊತ್ತು ಸಭೆ ಸೇರಿರುವುದು ಏತಕ್ಕೆಂದರೆ ಅಂತರಿಕವಾಗಿ ಎಲ್ಲರೂ ಚೆನ್ನಾಗಿ ಇರಬೇಕು ಎಂದು....

ಶ್ರೀ ಎಸ್.ಹೆಚ್. ಕೌಜಲಗಿ:- ಇವೊತ್ತಿನ ದಿವಸ ಈ ಮಸೂದೆಯ ಬಗ್ಗೆ....

ಶ್ರೀ ಡಿ.ಬಿ. ಚಂದ್ರೇಗೌಡ:- ಮುಂದಿನ ಅಧಿವೇಶನದಲ್ಲಿ ಆದರೂ ಇದನ್ನು ತೆಗೆದುಕೊಳ್ಳೋಣ...

ಶ್ರೀ ಎಂ. ವೀರಪ್ಪಮೊಯಿಲಿ:- ಈಗ ಈ ಬಗ್ಗೆ ನಾವು ಏನೂ ಕಾರ್ಯಕ್ರಮ ತೆಗೆದುಕೊಳ್ಳುವುದಿಲ್ಲ ಎಂದು ಹೇಳಲಿಲ್ಲ. ವಿಷಯ ಇಷ್ಟೇ ಇದೆ; ನಾವು ಜಿಲ್ಲಾ ಪರಿಷತ್ ಮತ್ತು ಮುನಿಸಿಪಾಲಿಟಿ ಆಕ್ಟ್‌ಗೆ ಅಮೆಂಡ್‌ಮೆಂಟ್ ತಂದು ಇದನ್ನು ಮಾಡಬೇಕೇ ಅಥವಾ ಪ್ರತ್ಯೇಕವಾದಂತಹ ಸ್ವತಂತ್ರವಾದಂಥ ಕಾಯಿದೆ ಮಾಡಬೇಕೇ ಎಂಬ ಬಗ್ಗೆ ಕೇಂದ್ರ ಸರ್ಕಾರದ ಜೊತೆ ಪತ್ರವ್ಯವಹಾರ ಮಾಡುತ್ತಿದ್ದೇವೆ. ಏಕೆಂದರೆ ಇದು ಕನ್‌ಕರೆಂಟ್ ಲಿಸ್ಟ್‌ನಲ್ಲಿ ಇದೆ. ಈ ವಿಷಯವನ್ನು ನಾವು ಗಂಭೀರವಾಗಿ ಪರಿಶೀಲನೆ ಮಾಡುತ್ತಿದ್ದೇವೆ. ಇಷ್ಟು ಹೇಳಬಹುದು; ಮುಂದಿನ ಅಧಿವೇಶನದಲ್ಲಿ ಏನಾದರೂ ಕಾನೂನು ತರುವುದಿದ್ದರೆ ಕಾನೂನು ತಂದೇ ತರುತ್ತೇವೆ. ಇದಕ್ಕೆ ಬೇರೆ ಯಾವ ರೀತಿಯಾದ ಸಂವಿಧಾನಿಕವಾದ ಅಡಚಣೆ ಇಲ್ಲದೇ ಇದ್ದರೆ ನಾವು ಕಾನೂನು ತಂದೆ ತರುತ್ತೇವೆ ಎಂದು ಇಷ್ಟು ಮಾತ್ರ ಹೇಳಬಹುದೇ ಹೊರತು ಇಂತಹ ರೀತಿಯಲ್ಲಿ ಕಾನೂನು ತರುತ್ತೇವೆ ಎಂದು ಹೇಳತಕ್ಕದ್ದು ತಮಗೆ ಗೊತ್ತಿರುವಂತೆ ಆಗುವುದಿಲ್ಲ...

ಶ್ರೀ ಕೆ.ಎಸ್. ಈಶ್ವರಪ್ಪ:- ಮಾನ್ಯ ಅಧ್ಯಕ್ಷರೇ, ಮಾನ್ಯ ವಾಟಾಳ್ ನಾಗರಾಜ್ ಅವರನ್ನು ಕರೆಯಿರಿ. ನಾವು ಎಲ್ಲಾ ವಿರೋಧ ಪಕ್ಷದ ವತಿಯಿಂದ ಹೇಳಿದ್ದೇವೆ. ತಾವೂ ಒಂದು ಮಾತು ಹೇಳಿ ಅಧ್ಯಕ್ಷರೇ, ಅವರು ಬರುತ್ತಾರೆ.....

ಶ್ರೀ ಸಿ. ಭೈರೇಗೌಡ:- ತಾವೂ ಸಹ ಮತ್ತೊಂದು ಸಾರಿ ಸೂಚನೆ ಕೊಡಬೇಕು.....

ಶ್ರೀ ಕೆ.ಎಸ್. ಈಶ್ವರಪ್ಪ: ವಿರೋಧ ಪಕ್ಷದ ನಾಯಕರು ಹೇಳಲಿ ಅವರು ಬರುತ್ತಾರೆ.

ಶ್ರೀ ಸಿ. ಭೈರೇಗೌಡ:- ತಾವು ಒಂದು ಸಲ ಸೂಚನೆ ಕೊಟ್ಟು ಬಿಡಿ, ಈ ಸಾರಿ ಬಂದು ಬಿಡುತ್ತಾರೆ.

ಶ್ರೀ ಕೆ.ಎಸ್. ಈಶ್ವರಪ್ಪ:- ವಿರೋಧ ಪಕ್ಷ ಕಡೆಯಿಂದ ವಿರೋಧಪಕ್ಷದ ನಾಯಕರು ಮನವಿ ಮಾಡಿಕೊಳ್ಳಲಿ ಅವರು ಬರುತ್ತಾರೆ. ಬನ್ನಿ ವಾಟಾಳ್ ನಾಗರಾಜ್ ಅವರೇ....

(ಗೊಂದಲ)

(ಈ ಹಂತದಲ್ಲಿ ಮಾನ್ಯ ವಾಟಾಳ್ ನಾಗರಾಜ್ ಅವರು ತಮ್ಮ ಸ್ಥಾನಕ್ಕೆ ಬಂದು ಕುಳಿತು ಕೊಂಡರು)

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಅಧ್ಯಕ್ಷರೇ ಇವರ ಬಗ್ಗೆ ಒಂದು ಮನವಿ. ನಾನು ಇದನ್ನು ಯಾವುದೋ ಒಂದು ಉದ್ದೇಶವನ್ನು ಇಟ್ಟುಕೊಂಡು ಪ್ರಸ್ತಾಪ ಮಾಡಿದ್ದೇನೆ. ಬಹಳ ನೋವಿನಿಂದ ಈ ಮಾತನ್ನು ಹೇಳಬೇಕಾಗಿದೆ. ಇದರ ಬಗ್ಗೆ ಈ ಸದನದಲ್ಲಿ ಕಳೆದ ಆರು ತಿಂಗಳಿಂದ ಕೇಳುತ್ತಿದ್ದೇನೆ. ಇದು ಹೊಸದೇನಲ್ಲ. ಇದರ ಬಗ್ಗೆ ನನಗೆ ಯಾವುದೇ ಹುಚ್ಚೇನೂ ಇಲ್ಲ. ಬೆಳಗಾವಿ ನಗರಪಾಲಿಕೆಯ ಮೇಲೆ ಬೇರೆ ಬಾವುಟ ಇರಬಹುದು. ಆದರೆ ಕರ್ನಾಟಕದ ಎಲ್ಲಾ ಪರುಸಭೆಗಳ

ಮೇಲೆ ಕನ್ನಡದ ಧ್ವಜ ಆಗಲೀ ಬೇರೆ ಪಕ್ಷದ ಧ್ವಜ ಆಗಲಿ ಹಾಕಿಕೊಳ್ಳಲು ಅಧಿಕಾರ ಇದೆಯೇ ಎಂಬ ಸರ್ಕಾರದ ತೀರ್ಮಾನ ಮಾಡಬೇಕು. ಮಾಡಲಿಲ್ಲ ಎಂದರೆ ಎಲ್ಲಾ ಪುರಸಭೆಗಳ ಮೇಲೂ ಕೂಡ ತಮ್ಮ ಇಚ್ಛೆ ಬಂದ ಧ್ವಜಗಳನ್ನು ಹಾಕಿಕೊಳ್ಳಬಹುದು. ಈಗ ಕೇಂದ್ರದಲ್ಲಿ ಕೂಡ ಯಾವ ಧ್ವಜ ಹಾಕಬೇಕು ಎಂಬ ಬಗ್ಗೆ ಕಾನೂನು ಇರುವಾಗ ಅದು ನಮ್ಮ ಸರ್ಕಾರದಲ್ಲಿ ಇಲ್ಲವೇ ಈ ಪುಸ್ತಕ ತರಿಸಿಲ್ಲವೇ ಆ ಕಾನೂನಿನ ಬಗ್ಗೆ ಇವರಿಗೆ ಅರಿವು ಇಲ್ಲವೇ? ಮಾನ್ಯ ಸಂಸದೀಯ ಸಚಿವರಾದ ಮೊಯಿಲಿಯವರು ನಾಲ್ಕಾರು ಬಾರಿ ಈ ಬಗ್ಗೆ ಹೇಳಿದ್ದಾರೆ. ಈ ಬಗ್ಗೆ ಕಾಯಿದೆ ತರುತ್ತೇವೆ ಎಂದು ಹೇಳಿದ್ದಾರೆ. ಎಲ್ಲಾ ಪುರಸಭೆಗಳು ಒಪ್ಪತಕ್ಕ ಒಂದು ಕಾಯಿದೆಯನ್ನು ತರುತ್ತೇವೆ ಎಂದು ನಾಲ್ಕಾರು ಬಾರಿ ಹೇಳಿದ್ದಾರೆ. ಮತ್ತೆ ಮತ್ತೆ ಇದನ್ನು ನಾನು ಏತಕ್ಕೆ ಹೇಳುತ್ತಿದ್ದೇನೆ ಅಂದರೆ ಇದೇ ಒಂದು ಚಟ, ಬೆಳೆದರೆ ಬೇರೆ ಪುರಸಭೆಗಳ ಮೇಲೂ ಇಂತಹ ಪರಿಸ್ಥಿತಿ ಬರುತ್ತದೆ. ಅದಕ್ಕೆ ದಯವಿಟ್ಟು ಮುಂದಿನ ಸಭೆಯಲ್ಲಿಯಾದರೂ ಈ ಪ್ರಶ್ನೆಯನ್ನು ಬಗೆಹರಿಸಬೇಕು. ಇದಕ್ಕೆ ಒಂದು ಕಾಯಿದೆಯನ್ನು ತರಬೇಕು ಮತ್ತು ಕೇಂದ್ರದ ಕಾಯಿದೆಯನ್ನು ಪರಿಶೀಲನೆ ಮಾಡಲಿ; ಅದಕ್ಕೆ ನನ್ನ ಅಭ್ಯಂತರ ಇಲ್ಲ ಇದರ ಬಗ್ಗೆ ಕಾಯಿದೆಯನ್ನು ತರತಕ್ಕದ್ದರಲ್ಲಿ ತಾವು ಸ್ಪಷ್ಟ ನೀತಿಯನ್ನು ಅನುಸರಿಸಬೇಕು ಎಂಬುದೇ ನನ್ನ ವಾದ...

ಶಾಸನ ರಚನೆ

1990ನೇ ಇಸವಿಯ ಕರ್ನಾಟಕ ರಾಜ್ಯದ ನಾಗರೀಕ ಸೇವೆಗಳ (ನಿರಸನ) ವಿಧೇಯಕ

ವಿಧೇಯಕವನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು.

ಶ್ರೀ ಎಸ್.ಹೆಚ್. ಕೌಜಲಗಿ: ಮಾನ್ಯ ಅಧ್ಯಕ್ಷರೇ... ಇವ್ತೊತ್ತಿನ ದಿವಸ....

ಅಧ್ಯಕ್ಷರು: ಇದನ್ನು ಚರ್ಚೆ ಮಾಡಬೇಕಾಗಿದಯಾ ಕೌಜಲಗಿಯವರೇ....

† ಶ್ರೀ ಎಚ್.ಎಸ್. ಕೌಜಲಗಿ (ಬೈಲಹೊಂಗಲ):- ಮಾನ್ಯ ಅಧ್ಯಕ್ಷರೇ, ಒಂದು ನಿಮಿಷದಲ್ಲಿ ಹೇಳಿ ಬಿಡುತ್ತೇನೆ. ಇವ್ತೊತ್ತಿನ ದಿವಸ ಮಾನ್ಯಸಂಸಧಿಯ ವ್ಯವಹಾರ ಸಚಿವರು ಈ ಕರ್ನಾಟಕ ಸ್ಟೇಟ್ ಸಿವಿಲ್ ರೂಲ್ಸ್ ಅಮೆಂಡ್‌ಮೆಂಟ್ ಆನ್ನು ಡಿಲೀಟ್ ಮಾಡುವ ಸಲುವಾಗಿ ತಂದಂತಹ ಈ ಒಂದು ಆಕ್ಟ್ ಅನ್ನು ನಾನು ವಿರೋಧಿಸುತ್ತೇನೆ. ಮೊದಲನೆಯದಾಗಿ ಈ ಮೊದಲಿನ ಆಕ್ಟ್‌ಗೆ 12.7.85ನೇ ಇಸವಿಯಲ್ಲಿ ಮಾನ್ಯ ಪ್ರಸಿಡೆಂಟ್‌ರವರ ಅಸೆಂಟ್ ಸಿಕ್ಕಿತು. ಇದರ ಉದ್ದೇಶ ಏನು ಎಂದರೆ ನಮ್ಮ ಸಂವಿಧಾನದ ಆರ್ಟಿಕಲ್ 309ರ ಪ್ರಕಾರ ರಿಕ್ರೂಟ್‌ಮೆಂಟ್ ಮತ್ತು ಸರ್ವೀಸ್ ರೂಲ್ಸ್ ಅನ್ನು ಇದರಲ್ಲಿ ನಮೂದಿಸಲಾಗಿದೆ. ಇವ್ತೊತ್ತಿನ ದಿವಸ ಈ ಸಂವಿಧಾನದ ಕೆಳಗೆ ನಮ್ಮಲ್ಲಿ ಈ ಸರ್ವೀಸ್ ರೂಲ್ಸ್ ಯಾವ ಪ್ರಕಾರ ಇರಬೇಕು ಎನ್ನುವುದರ ಸಲುವಾಗಿ ಶ್ರೀಮಾನ್ ದೇವರಾಜ ಅರಸರು ಇದ್ದಾಗ ಈ ಆಕ್ಟ್‌ನ್ನು ಪಾಸ್ ಮಾಡಿದರು. ಆ ಕಾಲಕ್ಕೆ ಎರಡು ಸದನದವರು ವಿಚಾರಮಾಡಿದ ನಂತರ ರಾಷ್ಟ್ರಪತಿಗಳಿಗೆ ಕಳಿಸಿಕೊಟ್ಟು ರಾಷ್ಟ್ರಪತಿಗಳಿಂದ ಅಂಗೀಕಾರ ಪಡೆಯಲಾಗಿದೆ. ಈ ಆಕ್ಟ್ ಇರುವುದರಿಂದ ಸರ್ಕಾರಕ್ಕೆ ಯಾವರೀತಿ ತೊಂದರೆಯಾಗಲಿಕ್ಕೆ ಹತ್ತಿದೆ ಅಂದರೆ ಅದರಲ್ಲಿ ಯಾವುದಾದರೂ ಒಂದು ರೆಕ್ರೂಟ್‌ಮೆಂಟ್ ಮಾಡಬೇಕಾದರೆ ಭೇಗ ಮಾಡಲಿಕ್ಕೆ ಬರುವುದಿಲ್ಲ ಎರಡನೆಯದಾಗಿ, ಎಸ್.ಸಿ.ಎಸ್.ಟಿ ನವರಿಗೆ ಯಾವ ಪ್ರಕಾರ ಆಪಾಯಿಂಟ್ ಮಾಡಬೇಕು ಎಂದು ಎಸ್.ಸಿ.ಎಸ್.ಟಿ.ನವರಿಗೆ ಅನುಕೂಲವಾಗುವ ದೃಷ್ಟಿಯಿಂದ ಶ್ರೀಮಾನ್ ದೇವರಾಜ ಅರಸರು ಈ ಆಕ್ಟನ್ನು ತಂದಿದ್ದರು. ಇವತ್ತಿನದಿವಸ ಡಿ.ಪಿ.ಎ.ಆರ್.ರವರಿಗೆ ಅನುಕೂಲವಾಗದಿದ್ದ ಕಾರಣವೇ ಇದನ್ನು ಡಿಲೀಟ್ ಮಾಡಲಿಕ್ಕೆ ಹತ್ತಿದ್ದಾರೆ. ಇದು ಜರೂರಿಲ್ಲ ಎಂದು ಹೇಳಬಹುದಿತ್ತು. ಈ ಬಿಲ್‌ನಲ್ಲಿರುವ ಸ್ಟೇಟ್‌ಮೆಂಟ್ ಆಫ್ ಆಬ್ಜೆಕ್ಟ್ಸ್ ಅಂಡ್ ರೀಸನ್ಸ್‌ನಲ್ಲಿ ಈ ರೀತಿ ಇದೆ:

12.50 ಪಿ.ಎಂ.

"It is considered necessary to repeal the Karnataka State Civil Services Act, 1990 as there are sufficient provisions in the